# ನಾಗದೇವರ ಹಾಲು

ಪ.ರಾಮಕೃಷ್ಣ ಶಾಸ್ತ್ರಿ

**ಗೌಳಿಗರ** ಸೋಮಣ್ಣ ಐದಾರು ಹಸು ಸಾಕಿ ಹಾಲು ಮಾರಾಟದಿಂದಲೇ ಬದುಕು ಸಾಗಿಸುತ್ತಿದ್ದ. ಒಬ್ಬನೇ ಮಗ ಶಂಕರನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿ, ದೊಡ್ಡ ಅಧಿಕಾರಿಯಾಗಿ ಮಾಡಬೇಕೆಂದು ಕನಸೂ ಕಂಡಿದ್ದ.

ಸೋಮಣ್ಣನ ಕೊಟ್ಟಿಗೆಯಲ್ಲಿದ್ದ ಒಂದು ಹಸು ಏಕೋ ಕರು ಹಾಕಿರಲಿಲ್ಲ. ಪಕ್ಕದ ಮನೆಯ ಅಜ್ಜಿ ತುಂಗವ್ವ, 'ಸೋಮಣ್ಣ, ನಾಗದೇವರ ಮುನಿಸು ಇದ್ರೆ ಹಿಂಗಾಗ್ತದೆ. ಒಂದ್ ವರ್ಷದೊಳಗೆ ಇದು ಕರಾ ಹಾಕ್ತು ಅಂದ್ರೆ ಒಂದು ತಿಂಗಳು ನಾಗಪ್ನ ಕಲ್ಲಿಗೆ ತಂಬಾಲು ಹಾಕ್ತೀನಿ ಅಂತ ಹರಕೆ ಹೊತ್ತುಕೋ. ಒಳ್ಳೆದಾಗುತ್ತೆ' ಎಂದು ಸಲಹೆ ಕೊಟ್ಟಳು.

ಸೋಮಣ್ಣ ಹಾಗೆಯೇ ಹರಕೆ ಹೊತ್ತುಕೊಂಡ. ಒಂದು ವರ್ಷ ಕಳೆಯುವ ಮೊದಲು ಅವನ ಹಸು ಮುದ್ದಾದ ಕರುವಿಗೆ ಜನ್ಮ ನೀಡಿತು. ನಾಗಪ್ಪನ ಕೃಪೆಯಿಂದ ತನ್ನ ಇಷ್ಟಾರ್ಥ ನೆರವೇರಿತು ಎಂದು ಖುಷಿಪಟ್ಟ ಸೋಮಣ್ಣ ಹರಕೆ ನೆರವೇರಿಸಲು ಸಿದ್ಧನಾದ. ಪ್ರತೀ ದಿನ ಬೆಳಗ್ಗೆ ಒಂದು ಚೊಂಬು ತುಂಬ ತಂಬಾಲನ್ನು ನಾಗಪ್ಪನ ಕಲ್ಲಿಗೆ ಹೊಯಿದು ಬರುವಂತೆ ಮಗ ಶಂಕರನ ಕೈಗೆ ಕೊಡುತ್ತಿದ್ದ.

ಕೆಲವು ದಿನ ಕಳೆಯಿತು. ಸೋಮಣ್ಣನ ಕನಸಿನಲ್ಲಿ ನಾಗಪ್ಪ ಕಾಣಿಸಿಕೊಂಡು, 'ನನಗೆ ಸಂತೋಷವಾಗಿದೆ. ನಿನ್ನೆಯಿಂದ ನನಗೆ ಹಾಲು ತಲುಪುತ್ತಿದೆ' ಎಂದು ಹೇಳಿತು. ಸೋಮಣ್ಣನಿಗೆ ಮಗನ ಮೇಲೆ ಅನುಮಾನ ಬಂದಿತು. ನಾಗಪ್ಪನ ಗುಡಿ ಮಾರು ದೂರದಲ್ಲಿದೆ. ಆದರೆ ಹಾಲು ಹೊಯ್ಯಲೆಂದು ಹೋದವ ಮರಳಿ ಬರುವಾಗ ಅರ್ಧ ತಾಸು ಕಳೆಯುತ್ತಿತ್ತು. ಹಾಗಿದ್ದರೆ ಇವನು ನಾಗಪ್ಪನಿಗೆ ಹಾಲು ಎರೆಯದೆ ಬಾಬಣ್ಣನ ಹೋಟೆಲಿಗೆ ಕೊಟ್ಟು ಹಣ ಪಡೆದು ಗೆಳೆಯರೊಂದಿಗೆ ಮಜಾ ಮಾಡಿರಬೇಕು. ನಿನ್ನೆ ಮಾತ್ರ ಹಾಲು ಎರೆದು ಬಂದಿರಬೇಕು. ಅದಕ್ಕೇ ನಾಗಪ್ಪ ಇಂದು ಕನಸಲ್ಲಿ ಬಂದಿದ್ದಾನೆ ಎಂದುಕೊಂಡ. ಮರುದಿನ ಮಗ ಹಾಲಿನ ಚೊಂಬು ಹಿಡಿದು ಹೊರಟಾಗ ಅವನಿಗೆ ತಿಳಿಯದಂತೆ ಅವನನ್ನು ಹಿಂಬಾಲಿಸಿದ.

ಶಂಕರ ನಾಗನ ಕಲ್ಲಿನ ಬಳಿಗೆ ಹೋಗಿ ಒಂದು ಹನಿ ಹಾಲು ಮಾತ್ರ ಹಾಕಿ ಅಲ್ಲಿಂದ ಮುಂದೆ ಹೋದ. ಅವನು ಬಾಬಣ್ಣನ ಹೋಟೆಲಿನ ದಾರಿ ಬಿಟ್ಟು ಯಾವುದೋ ಹರಕು ಗುಡಿಸಲಿನ ಒಳಗೆ ಹೋಗುವುದು ಕಾಣಿಸಿತು. ಸೋಮಣ್ಣ ಸದ್ದಾಗದಂತೆ ಬಂದು ಗುಡಿಸಲಿನ ಒಳಗೆ ಇಣುಕಿದ. ಅಲ್ಲಿ ಹುಟ್ಟಿದ ಕೂಡಲೇ ತಾಯಿಯನ್ನು ಕಳೆದುಕೊಂಡ ಅವಳಿ ಮಕ್ಕಳನ್ನು ಅಜ್ಜಿಯೊಬ್ಬಳು ಸಾಕುತ್ತಿರುವುದು ಕಾಣಿಸಿತು. ಚೊಂಬಿನಲ್ಲಿರುವ ಹಾಲನ್ನು ಅಜ್ಜಿಯ ಪಾತ್ರೆಗೆ ಸುರಿದು, 'ಅಜ್ಜಿ, ಮಕ್ಕಳಿಗೆ ಹೊಟ್ಟೆ ತುಂಬ ಹಾಲು ಕುಡಿಸು' ಎಂದು ಹೇಳಿ ಶಂಕರ ಅಂಗಳಕ್ಕಿಳಿಯುವಾಗ ಸೋಮಣ್ಣ ಹೋಗಿ ಅವನ ಕೈ ಹಿಡಿದುಕೊಂಡ. 'ಏನೋ, ನಾಗಪ್ನಿಗೆ ಹಾಲು ಹಾಕು ಅಂದ್ರೆ ಏನೋ ಮಾಡ್ತಾ ಇದ್ದೀಯಾ?' ಎಂದು ಕೇಳಿದ.

'ಅಪ್ಪ, ನನ್ನನ್ನು ಕ್ಷಮಿಸಿ. ನನ್ನ ಮೇಷ್ಟ್ರು ಕಲ್ಲು ನಾಗರ ಕಂಡರೆ ಹಾಲೆರೆವರು, ನಿಜದ ನಾಗರ ಕಂಡರೆ ಕೊಲ್ಲೆಂಬರು ಎಂಬ ಶರಣರ ವಚನದ ಅರ್ಥವನ್ನು ವಿವರಿಸಿದ್ದಾರೆ ಅಪ್ಪ. ಕಲ್ಲಿಗೆ ಹಾಲೆರೆಯುವ ಬದಲು ಕಷ್ಟದಲ್ಲಿರುವವರಿಗೆ ಅದನ್ನು ಕೊಟ್ಟರೆ ದೇವರಿಗೆ ಸಮರ್ಪಣೆಯಾಗುತ್ತದೆಯಂತೆ. ಈ ಬಡ ಮಕ್ಕಳಿಗೆ ತಂದೆ, ತಾಯಿ ಇಬ್ಬರೂ ಇಲ್ಲ. ಕಷ್ಟದಲ್ಲಿ ಅಜ್ಜಿಯೇ ಸಾಕುತ್ತಿದ್ದಾಳೆ. ಇದು ದೇವರಿಗೆ ಇಷ್ಟವಾದೀತೆಂದು ದಿನವೂ ಹಾಲು ಕೊಟ್ಟು ಬರುತ್ತಿದ್ದೇನಪ್ಪ' ಎಂದ.

ಸೋಮಣ್ಣನ ಕಣ್ಣುಗಳು ಹನಿಗೂಡಿದವು. 'ಇಷ್ಟ್ ಚಿಕ್ಕ ವಯಸ್ನಾಗೆ ಏಟೊಂದು ತಿಳ್ಕಂಡಿದೀಯ ಮಗ! ಮೇಷ್ಟ್ರು ಹೇಳ್ದ ಮಾತು ನಿಜ ಕಣ್ಲ. ನಾಳೆಯಿಂದ ಮಕ್ಕಳಿಗೆ ಹಾಲು ಮಾತ್ರ ಅಲ್ಲ, ಇನ್ನೂ ಏನು ಬೇಕೋ ಎಲ್ಲ ಕೊಡ್ತೀನಿ. ಬಡ ಜೀವಗಳು ಹಾಲು ಕುಡ್ದು ಬದುಕ್ಲಿ. ದ್ಯಾವ್ರಿಗೆ ಇದ್ರಿಂದ ತುಂಬ ಸಂತೋಷ ಆಗಿದೆ!' ಎಂದು ಮಗನನ್ನು ತಬ್ಬಿಕೊಂಡು ಹೇಳಿದ. ●